# FORM – II

## |See Rule II(4)|

**OFFICE OF THE DEPUTY DIRECTOR OF PUBLIC INSTRUCTION, MYSURU – 570 004.**

No. RTE G3/2282/RTE Reg./17/2023-24 Date:- 20.06.2024

NOTARY
K. BORAPPA
B.A., LL.B.,
Advocate & Notary
Reg. No. 20338
Mysore District
Expires On
08-03-2025
GOVERNMENT OF INDIA

To.

President
Kodava Samaja®
Vijayanagar 1st Stage
Mysuru 570 017

Dear Sir/Madam,

Subject:- Recognition Certificate for the School under sub-rule 4 of Rule 12 of Karnataka Right of Children to Free and Compulsory Education Rules, 2010 and under Section 18 of Right of Children to Free and Compulsory Education Act, 2009.

*****

With reference to your application and subsequent correspondence with the School/Inspection by Departmental Officers. I convey the grant of provisional recognition to the **KAVERI VIDYA SAMSTHE HS, KUVEMPUNAGAR, MYSURU. DISE Code : 29261202311** For classes **1st Standard to 8th Standard for A period of 2019- 2020 to 2024-2025 and subject to fulfillment of following conditions.**

1. This is a provisional grant of recognition under the RTE Act and Rules and is not extendable beyond Class VIII.
2. The School shall abide by all the provisions of the RTE Act 2009, and the RTE Rules 2010, referred here in.
3. The School shall admit in Class, I to the extent of 25% of the strength of the Class, Children belonging to weaker sections and disadvantaged groups in the neighborhood and provide free and compulsory education till completion of elementary education. Provided that if the school admits children in Pre-Primary Classes also, the school shall follow these norms. The children so admitted shall not be discriminated from the rest of the children or segregated or treated separately in any manner.
4. For the children referred in paragraph 3, the school shall be reimbursed ad per Section 12(2) of the Act. In order to receive such reimbursements, the school shall open and maintain a separate bank account which is subject to audit by the department.
5. The Society/School shall not collect any capitation fee of voluntary donations from the parents of children at any time either during admission or during the course of the academic year. The school shall collect only tuition and other fee as approved by the department. The scale of fee shall be notified by the school and displayed prominently in the school premises.

6. The school shall not subject the child or the parents to any screening procedure including and test and interview.
7. Admissions shall be made only during the period notified by the department.

8. The school shall not deny admission to any child.
   (i) For Lack of age proof.
   (ii) On grounds of Caste, Religion, Race or Place of Birth, Language,
   (iii) If admission is sought subsequent to the extended period of admission.

9. The School shall ensure:
   a) No child admitted shall be held back in any class or expelled from school till completion of elementary education in a school.
   b) No child shall be subjected to physical punishment or mental harassment.
   c) No child is required to pass any Board Examination till the completion of elementary education.
   d) Every child completing elementary education shall be awarded a certificate as laid down Under Rule 21.
   e) The school shall also admit children with special needs/ special children as per provisions of the Act.
   f) The teachers recruited have minimum qualification as is prescribed for elementary school teachers in the RTE Rules.
   g) The salary and allowance payable to and the terms and conditions of service of teachers shall be as prescribed by the State Government and the salaries are paid to teachers only through bank.
   h) The teachers perform the duties prescribed under section 24(1) of the Act and Rule 17 of the RTE. Rules and shall not engage themselves in private tuitions for monitory considerations.
10. The school shall follow the curriculum and text books of the academic authority to which it is affiliated.
11. The school shall admit student in proportion to the facilities available in the school as prescribed in the Section 19 of the Act.
12. The school shall maintain the norms and standards as specified in Section 19 of the Act, deficiencies noticed by the department staff are given in the annexure.
13. The school shall not run any unauthorized Classed/Sections either within the school premises or outside.
14. The school buildings another infrastructure facilities should not be used either during day or night for any commercial activities or for political and non-education activities.
15. The school shall not run for profit to any individual or group or association of persons.
16. The accounts of the school are audited by a Charted Accountant and a copy of such audited statements is sent to the DDPI/BEO by end of June every year.
17. The School building/ physical facilities /shall not be used for any commercial purpose, political activities or other non- academic activities in the day /at night.
18. School shall not be used with the intention of financial benefit of any individual or group or institution.

NOTARY ★ GOVT. OF INDIA
K. BORAPPA
B.A., LL.B.,
Advocate & Notary
Reg. No. 20338
Mysore District
Expires On
28-03-2025

19. This accreditation is subjected to a condition that after receiving the accreditation for building safety and fire safety, certificate to be obtained from the competent authority within 3 months and submitted to the Regional Education Officer. If failed to submit the certificate the accreditation will get cancelled automatically.
20. Upon submission of self declared documents by the Management Board, as stated in the scheduled rule, and proposal is received from the Regional Education Officer for accreditation, the accreditation becomes valid. If any of the documents is found untrue the accreditation stands cancelled automatically.
21. This accreditation letter has been given as per final order of appeal 2.
22. The institution should be bound to the academic and administrative rules and regulations passed by the department now and then.
23. It is subjected to the condition of procurement of fire safety and building safety every year.
24. Approval of the department is compulsory for Additional Classes/departments if started.

DDPI
(ADMIN)

MYSURU

**Copy to:**

1. Block Education Officer, Mysuru
2. Office Copy.

NOTARY GOVERNMENT OF INDIA
K. BORAPPA
B.A., LL.B.,
Advocate & Notary
Reg. No. 20338
Mysore District
Expires On
05-03-2025

TRANSLATED this document from the original in Kannada Language to English And the translation Verified by me

NOTARY, MYSORE DIST

22 JUN 2024

ಕರ್ನಾಟಕ ಸರ್ಕಾರ

# ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು

ಇ–ಟಚಿಟ ಖಜ : ಜಜಮಿಟಥಿ@ರಟಚಿಟ.ಛಿಂಟ & ಜಜಮಿ.ಜಜಣ.ಇಚಿಡಿಟಥಿ@ಟುಛಿ.ಟಿ ಖಿಜಟಜಠಿhoಟಿಜ ಓo : 0821–2490025

ಸಂಖ್ಯೆ: ಜಿ3/2282/RTE ಮಾನ್ಯತೆ/17/2023–24 ದಿನಾಂಕ: 20–06–2024

–: ನಮೂನೆ–02:–

ಗೆ

ಅಧ್ಯಕ್ಷರು,
ಕೊಡವ ಸಮಾಜ(ರಿ)
ವಿಜಯನಗರ 1 ನೇ ಹಂತ,
ಮೈಸೂರು

**ವಿಷಯ:–** ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ನಿಯಮಗಳು 2012 ಕರ್ನಾಟಕ ಇದರ ನಿಯಮ 12 ರ ಉಪನಿಯಮ–4 ಮತ್ತು ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ 2009ರ ಸೆಕ್ಷನ್ 18 ರಂತೆ ಶಾಲೆಗಳಿಗೆ ಮಾನ್ಯತೆ ದೃಢೀಕರಣ ಪತ್ರ ನೀಡುವ ಬಗ್ಗೆ

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯತೆ ದೃಢೀಕರಣ ನೀಡಲು ನೀವು ನೀಡಿರುವ ಅರ್ಜಿ ಮತ್ತು ನಂತರ ನಿಮ್ಮ ಶಾಲೆಯ ಆಡಳಿತ ಮಂಡಳಿಯೊಂದಿಗೆ ಮಾಡಿದ ಪತ್ರ ವ್ಯವಹಾರ ಹಾಗೂ ಸಲ್ಲಿಸಿರುವ ದಾಖಲೆಗಳನ್ನು ಆಧರಿಸಿ **ಕಾವೇರಿ ವಿದ್ಯಾ ಸಂಸ್ಥೆ, ಹೆಚ್.ಎಸ್ ಆದಿಚುಂಚನಗಿರಿ ರಸ್ತೆ, ಕುವೆಂಪುನಗರ ಮೈಸೂರು.** ಡೈಸ್ ಸಂಖ್ಯೆ: **29261202311** ಈ ಶಾಲೆಗೆ ಒಂದ ರಿಂದ **ಎಂಟನೇ ತರಗತಿಯವರೆಗೆ ಆಂಗ್ಲ ಮಾಧ್ಯಮದಲ್ಲಿ 2019–20** ನೇ ಸಾಲಿನಿಂದ **2024–25** ಅವಧಿಯವರೆಗೆ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ತಾತ್ಕಾಲಿಕ ಮಾನ್ಯತೆಯನ್ನು ನೀಡಿದೆ ಮುಂದುವರೆದು ಮುಂದಿನ ವರ್ಷಗಳಲ್ಲಿ ಮಾನ್ಯತೆ ನವೀಕರಣಕ್ಕೆ ಇಲಾಖಾ ನಿಗದಿಗೊಳಿಸಿರುವ ಆನ್‌ಲೈನ್ ತಂತ್ರಾಂಶದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿದೆ.

**ಷರತ್ತುಗಳು:–**

1. ಈ ಮಾನ್ಯತೆಯು ಆರ್ ಟಿ ಇ ಕಾಯಿದೆ 2009 ಹಾಗೂ ಆರ್.ಟಿ.ಇ ನಿಯಮಗಳು 2012 ಕರ್ನಾಟಕ ಇದರ ಅಡಿಯಲ್ಲಿ ನೀಡಿದ ಮಾನ್ಯತೆಯಾಗಿದೆ.
2. ಈ ಮಾನ್ಯತೆಯು ಒಂದ ರಿಂದ ಎಂಟನೇ ತರಗತಿಯವರೆಗೆ ಮಾತ್ರ ಅನ್ವಯಿಸುತ್ತದೆ.
3. ಸದರಿ ಶಾಲೆಯ ಆಡಳಿತ ಮಂಡಳಿಯು ಈ ಮಾನ್ಯತೆ ನೀಡಿದ ದಿನಾಂಕದಿಂದ ಆರ್.ಟಿ.ಇ ಕಾಯಿದೆ 2009 ಹಾಗೂ ಆರ್.ಟಿ.ಇ ನಿಯಮಗಳು 2012 ಕರ್ನಾಟಕ ಇದರ ನಿಬಂಧನೆಗಳಿಗೆ ಬದ್ಧವಾಗಿರಬೇಕು.
4. ಈ ಶಾಲೆಯು ಒಂದನೇ ತರಗತಿಗೆ ನೆರೆಹೊರೆಯ ವ್ಯಾಪ್ತಿಗೆ ಸೇರಿದ ಅವಕಾಶ ವಂಚಿತ ಪ್ರವರ್ಗಕ್ಕೆ ಸೇರಿದ ಮಕ್ಕಳು ಮತ್ತು ದುರ್ಬಲ ವರ್ಗಕ್ಕೆ ಸೇರಿದ ಶೇಕಡ 25 ರಷ್ಟು ಮಕ್ಕಳನ್ನು ಒಂದನೇ ತರಗತಿಗೆ ದಾಖಲಾತಿ ಮಾಡಿಕೊಂಡು ಮತ್ತು ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಪ್ರಾಥಮಿಕ ಶಿಕ್ಷಣ ಪೂರೈಸುವವರೆಗೆ ನೀಡುವುದು. ಪೂರ್ವಪ್ರಾಥಮಿಕ ಶಾಲೆಗೆ ಮಕ್ಕಳನ್ನು ದಾಖಲಿಸಿಕೊಂಡಲ್ಲಿ ಇದೇ ಪ್ರಾಥಮಿಕ ಶಿಕ್ಷಣ ಪೂರೈಸುವವರೆಗಿನ ನಿಬಂಧನೆಗೆ ಒಳಗಾಗಲ್ಪಡುತ್ತದೆ. ಆರ್ ಟಿ ಇ ನಿಯಮದಡಿ ದಾಖಲಾದ ಮಕ್ಕಳನ್ನು ಯಾವುದೇ ಕಾರಣಕ್ಕೂ ತರಗತಿಯಲ್ಲಿ ಇತರೆ ಮಕ್ಕಳಿಂದ ಪ್ರತ್ಯೇಕಿಸಿ ತಾರತಮ್ಯ ಮಾಡುವಂತಿಲ್ಲ ಅಥವಾ ಬೇರೆ ಮಾಡುವಂತಿಲ್ಲ ಅಥವಾ ಇತರೆ ಯಾವುದೇ ರೀತಿಯಲ್ಲಿ ಅವರನ್ನು ಬೇರೆಯಾಗಿ ಪರಗಣಿಸುವಂತಿಲ್ಲ.
5. 4 ನೇ ಪ್ಯಾರಾದಂತೆ ಶಾಲೆಗೆ ದಾಖಲಿಸಿದ ಮಕ್ಕಳಿಗೆ ಸೆಕ್ಷನ್ 12(2) ರ ಕಾಯಿದೆಯಂತೆ ಶುಲ್ಕ ಮರುಪಾವತಿ ಮಾಡಲಾಗುತ್ತದೆ. ಈ ಶುಲ್ಕ ಮರುಪಾವತಿ ಸ್ವೀಕರಿಸಲು ಶಾಲೆಯು ಒಂದು ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯುವುದು ಮತ್ತು ಇಲಾಖೆಯ ಆಡಿಟ್ ಸಂದರ್ಭದಲ್ಲಿ ಮಾಹಿತಿ ಒದಗಿಸುವುದು.
6. ಶಾಲೆಯು/ಸಂಸ್ಥೆಯು ವಿದ್ಯಾರ್ಥಿಗಳ ಪೋಷಕರಿಂದ ಶಾಲಾ ದಾಖಲಾತಿ ಸಂದರ್ಭದಲ್ಲಿ ಅಥವಾ ಶೈಕ್ಷಣಿಕ ವರ್ಷದಲ್ಲಿ ಯಾವುದೇ ರೀತಿಯ ಕ್ಯಾಪಿಟೇಷನ್ ಶುಲ್ಕ ಅಥವಾ ಸ್ವ ಇಚ್ಛೆಯಿಂದ ನೀಡುವ ದೇಣಿಗೆಯನ್ನು ಸಂಗ್ರಹಿಸುವಂತಿಲ್ಲ. ಇಲಾಖೆಯಿಂದ ಅನುಮತಿಸಲ್ಪಟ್ಟ ಬೋಧನಾ ಶುಲ್ಕ ಮತ್ತು ಇತರೆ ಶುಲ್ಕವನ್ನು ಮಾತ್ರ ಪಡೆಯಬೇಕು. ಶಾಲಾ ಪ್ರಕಟಣಾ ಫಲಕದಲ್ಲಿ ಎಲ್ಲರಿಗೂ ಕಾಣುವಂತೆ ಶಾಲೆಯಿಂದ ಘೋಷಣೆಯಾದ ಶುಲ್ಕದ ವಿವರವನ್ನು ಪ್ರದರ್ಶಿಸುವುದು ಕಡ್ಡಾಯ.

7. ಶಾಲೆಯು ಮಕ್ಕಳ ದಾಖಲಾತಿ ಸಂದರ್ಭದಲ್ಲಿ ಮಕ್ಕಳನ್ನಾಗಲೀ ಅಥವಾ ಅವರ ಪೋಷಕರನ್ನಾಗಲೀ ಯಾವುದೇ ರೀತಿಯ ಪರೀಕ್ಷೆ, ಸಂದರ್ಶನದ ತರಹದ ಯಾವುದೇ ರೀತಿಯ ಸ್ಕ್ರೀನಿಂಗ್ ಪ್ರಕ್ರಿಯೆಗೆ ಒಳಪಡಿಸಬಾರದು.
8. ಇಲಾಖೆಯಿಂದ ಘೋಷಣೆಯಾದ ಅವಧಿಗೆ ಮಾತ್ರ ಮಕ್ಕಳನ್ನು ದಾಖಲಾತಿ ಮಾಡಿಕೊಳ್ಳುವುದು.
9. ಯಾವುದೇ ಮಕ್ಕಳಿಗೂ ಕೆಳಕಂಡ ಕಾರಣಗಳಿಗೆ ದಾಖಲಾತಿಯನ್ನು ತಿರಸ್ಕರಿಸುವಂತಿಲ್ಲ.
10. ಮಗುವಿನ ವಯಸ್ಸಿನ ದಾಖಲೆ ಇಲ್ಲದ ಕಾರಣಕ್ಕಾಗಿ ಜಾತಿ, ಧರ್ಮ ಅಥವಾ ಮಗುವಿನ ಜನನದ ಸ್ಥಳ, ಭಾಷೆ ಆಧಾರದ ಮೇಲೆ, ಶೈಕ್ಷಣಿಕ ವರ್ಷದ ದಾಖಲಾತಿಗೆ ನಿಗದಿಪಡಿಸಿದ ಅವಧಿ ಮುಗಿದ ನಂತರವೂ ಯಾವುದೇ ಮಗುವಿಗೆ ದಾಖಲಾತಿ ನಿರಾಕರಿಸುವಂತಿಲ್ಲ.
11. ಶಾಲೆಯು ಕೆಳಗಿನ ಅಂಶಗಳನ್ನು ಖಚಿತಪಡಿಸಬೇಕು.
    01 ಶಾಲೆಯಲ್ಲಿ ದಾಖಲಾದ ಯಾವುದೇ ಮಗುವನ್ನು ಪ್ರಾಥಮಿಕ ಶಿಕ್ಷಣ ಮುಗಿಯುವವರೆಗೆ ಯಾವುದೇ ಕಾರಣಕ್ಕಾಗಿ ಶಾಲೆಯಿಂದ ಹಿಂದೆತೆಯುವುದಾಗಲೀ ಅಥವಾ ಹೊರಹಾಕುವುದಾಗಲೀ ಮಾಡುವಂತಿಲ್ಲ.
    02 ಯಾವುದೇ ಮಗುವಿಗೆ ದೈಹಿಕ ಅಥವಾ ಮಾನಸಿಕ ಹಿಂಸೆಯನ್ನು ನೀಡುವಂತಿಲ್ಲ.
    03 ಶಾಲೆಯು ಕಾಯಿದೆ ಅನ್ವಯ ವಿಶೇಷ ಅಗತ್ಯವುಳ್ಳ ಮಕ್ಕಳ ದಾಖಲಾತಿಯನ್ನು ಮಾಡಿಕೊಳ್ಳಬೇಕು.ರಾಜ್ಯ ಸರ್ಕಾರದಿಂದ ನಿಗದಿಪಡಿಸಿದ ವೇತನ ಮತ್ತು ಇತರ ಸೌಲಭ್ಯಗಳು ಹಾಗೂ ಶಿಕ್ಷಕರ ಸೇವಾ ಸೌಲಭ್ಯಗಳು ಇರಬೇಕು ಮತ್ತು ಶಿಕ್ಷಕರ ವೇತನವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗೆ ಪಾವತಿಸಬೇಕು.
    04 ಶಿಕ್ಷಕರು ಕರ್ತವ್ಯ ಮತ್ತು ಜವಾಬ್ದಾರಿಯನ್ನು ಆರ್ ಟಿ ಇ ಕಾಯಿದೆ ಸೆಕ್ಷನ್ 24(1) ಮತ್ತು ನಿಯಮ 17 ರಲ್ಲಿ ಸೂಚಿಸಿದಂತೆ ನಿರ್ವಹಿಸಬೇಕು ಯಾವುದೇ ಶಿಕ್ಷಕರು ಖಾಸಗಿ ಮನೆ ಪಾಠದಲ್ಲಿ ತೆ ೊಡಗಿರಬಾರದು.
    05 ನಿಯಮ 21 ರನ್ವಯ ಪ್ರತಿಯೊಂದು ಮಗುವು ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದಾಗ ಪ್ರಮಾಣ ಪತ್ರವನ್ನು ನೀಡಬೇಕು.
    06. ಪ್ರಾಥಮಿಕ ಶಿಕ್ಷಣ ಮುಗಿಯುವವರೆಗೆ ಯಾವುದೇ ಮಗು ಯಾವುದೇ ಪರೀಕ್ಷಾ ಮಂಡಳಿ ನಡೆಸುವ ಪರೀಕ್ಷೆಯನ್ನು ತೇರ್ಗಡೆಯಾಗಬೇಕಾಗಿಲ್ಲ.
12. ಶಾಲೆಯು ಯಾವ ಪ್ರಾಧಿಕಾರಕ್ಕೆ ಸೇರ್ಪಡೆಯಾಗಿದೆಯೋ ಆ ಪಠ್ಯಕ್ರಮ ಮತ್ತು ಪಠ್ಯ ಪುಸ್ತಕವನ್ನು ಅನುಸರಿಸಬೇಕು.
13. ಆರ್.ಟಿ.ಇ ಕಾಯಿದೆ ಸೆಕ್ಷನ್ 19 ರಲ್ಲಿ ನಿಗದಿಪಡಿಸಿದಂತೆ ಶಾಲೆಯಲ್ಲಿ ಲಭ್ಯವಿರುವ ಸೌಲಭ್ಯಕ್ಕೆ ಅನುಗುಣವಾಗಿ ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳಬೇಕು.
14. ಆರ್.ಟಿ.ಇ ಕಾಯಿದೆ ಸೆಕ್ಷನ್ 19 ರಲ್ಲಿ ಸ್ಪಷ್ಟಪಡಿಸಲಾದ ಮಾನ ದಂಡಗಳನ್ನು ಪೂರೈಸಬೇಕು ಯಾವುದೇ ಮಾನದಂಡ ಪೂರೈಸದೇ ಇರುವುದು ಕಂಡು ಬಂದಲ್ಲಿ ಮಾನ್ಯತೆಯನ್ನು ಹಿಂದಕ್ಕೆ ಪಡೆಯಲಾಗುವುದು.
15. ಶಾಲೆಯು ಶಾಲಾವರಣದ ಒಳಗೆ ಅಥವಾ ಹೊರಗೆ ಯಾವುದೇ ಮಾನ್ಯತೆ ಇಲ್ಲದ ತರಗತಿ/ವರ್ಗಗಳನ್ನು ನಡೆಸುವಂತಿಲ್ಲ.
16. ಶಾಲಾ ಕಟ್ಟಡವನ್ನು/ ಭೌತಿಕ ಸೌಲಭ್ಯಗಳನ್ನು ಹಗಲು ವೇಳೆಯಲ್ಲಿ/ರಾತ್ರಿ ವೇಳೆಯಲ್ಲಿ ಇತರೆ ಯಾವುದೇ ವಾಣಿಜ್ಯ ಉದ್ದೇಶಕ್ಕಾಗಲೀ, ರಾಜಕೀಯ ಚಟುವಟಿಕೆಗಳಿಗಾಗಲೀ ಅಥವಾ ಇತರೆ ಶೈಕ್ಷಣಿಕೇತರ ಚಟುವಟಿಕೆಗಳಿಗೆ ಬಳಕೆ ಮಾಡುವಂತಿಲ್ಲ.
17. ಶಾಲೆಯನ್ನು ಒಬ್ಬ ವ್ಯಕ್ತಿಯ ಅಥವಾ ಒಂದು ಗುಂಪಿನ ಅಥವಾ ಒಂದು ಸಂಸ್ಥೆಯ ಆರ್ಥಿಕ ಲಾಭ ಗಳಿಕೆಯ ಉದ್ದೇಶದಿಂದ ಬಳಕೆ ಮಾಡುವಂತಿಲ್ಲ.
18. ಕಟ್ಟಡ ಸುರಕ್ಷತೆ ಹಾಗೂ ಅಗ್ನಿ ಸುರಕ್ಷತೆಗೆ ಸಂಬಂಧಿಸಿದಂತೆ ಮಾನ್ಯತೆ ಪಡೆದ 3 ತಿಂಗಳೊಳಗೆ ಸಕ್ಷಮ ಪ್ರಾಧಿಕಾರದಿಂದ ದೃಢಿಕರಣವನ್ನು ಪಡೆದು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವ ಷರತ್ತಿನ ಮೇರೆಗೆ ಈ ಮಾನ್ಯತೆಯು ಒಳಪಟ್ಟಿರುತ್ತದೆ. ಒಂದು ವೇಳೆ ಸುರಕ್ಷತಾ ಪ್ರಮಾಣಪತ್ರವನ್ನು ಸಲ್ಲಿಸದಿದ್ದಲ್ಲಿ ಮಾನ್ಯತೆಯು ತಾನೇ ತಾನಾಗಿ ರದ್ದಾಗುತ್ತದೆ.
19. ಶಾಲೆಯ ಎಲ್ಲ ಲೆಕ್ಕ ಪತ್ರಗಳನ್ನು ಚಾರ್ಟಡ್ ಅಕೌಂಟೆಂಟ್‌ರಿಂದ ಲೆಕ್ಕ ತಪಾಸಣೆ ಮಾಡಿಸಬೇಕು ಮತ್ತು ಒಂದು ಲೆಕ್ಕ ತಪಾಸಣೆ ಪ್ರತಿಯನ್ನು ಪ್ರತಿ ವರ್ಷದ ಜೂನ್ ಅಂತ್ಯಕ್ಕೆ ಉಪನಿರ್ದೇಶಕರು/ಬಿ.ಇ.ಒ. ಕಛೇರಿಗೆ ಸಲ್ಲಿಸಬೇಕು.

20. ಅನುಸೂಚಿತ ಕಾಯಿದೆಯಲ್ಲಿ ನಿಗದಿಪಡಿಸಲಾದ ಎಲ್ಲಾ ದಾಖಲೆಗಳನ್ನು ಸ್ವಯಂಘೋಷಣೆಯೊಂದಿಗೆ ಆಡಳಿತ ಮಂಡಳಿಯು ಸಲ್ಲಿಸಿ, ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮಾನ್ಯತೆಗಾಗಿ ಪ್ರಸ್ತಾವನೆ ಬಂದಲ್ಲಿ ಮಾನ್ಯತೆ ಸಿಂಧುವಾಗುತ್ತದೆ. ಯಾವುದೇ ದಾಖಲೆಗಳು ಸುಳ್ಳು ಎಂದು ಕಂಡುಬಂದಲ್ಲಿ ಮಾನ್ಯತೆಯು ತಾನೇ ತಾನಾಗಿ ರದ್ದಾಗುತ್ತದೆ.
21. ಈ ಮಾನ್ಯತೆ ಪತ್ರವನ್ನು ಮೇಲ್ಕಂಡ ಉಲ್ಲೇಖ 2 ರ ಅಂತಿಮ ಆದೇಶದಂತೆ ಈ ಮಾನ್ಯತೆ ಪತ್ರವನ್ನು ನೀಡಲಾಗಿದೆ.
22. ಇಲಾಖೆಯಿಂದ ಆಗಿಂದಾಗ್ಗೆ ಹೊರಡಿಸುವ ಶೈಕ್ಷಣಿಕ ಮತ್ತು ಆಡಳಿತಾತ್ಮಕ ನೀತಿ ನಿಯಮಾವಳಿಗಳಿಗೆ ಬದ್ಧವಾಗಿರಬೇಕು.
23. ಪ್ರತಿ ವರ್ಷವು ಅಗ್ನಿ ಸುರಕ್ಷತೆ ಹಾಗೂ ಕಟ್ಟಡ ಸುರಕ್ಷತೆ ಪ್ರಮಾಣ ಪತ್ರವನ್ನು ಪಡೆಯುವ ಷರತ್ತಿಗೆ ಒಳಪಟ್ಟಿರುತ್ತದೆ. ಇಲ್ಲವಾದಲ್ಲಿ ಮಾನ್ಯತೆ ತನ್ನತ್ತಾನೆ ರದ್ದಾಗುತ್ತದೆ.
24. ಹೆಚ್ಚುವರಿ ತರಗತಿ/ವಿಭಾಗಗಳನ್ನು ತೆರೆದಿದ್ದಲ್ಲಿ ಇಲಾಖಾ ಅನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ.

**ಉಪನಿರ್ದೇಶಕರು(ಆಡಳಿತ)**
**ಶಾಲಾ ಶಿಕ್ಷಣ ಇಲಾಖೆ ಮೈಸೂರು ಜಿಲ್ಲೆ**

**ಪ್ರತಿಯನ್ನು:**

1. ಕ್ಷೇತ್ರಶಿಕ್ಷಣಾಧಿಕಾರಿಗಳು, ಮೈಸೂರು ದಕ್ಷಿಣ ವಲಯ
2. ಕಛೇರಿ ಪ್ರತಿ